ಕರ್ನಾಟಕ ಸರ್ಕಾರ
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಡಿಟಿಇ 03 ಎಸ್‌ಪಿಎಸ್(1)2022

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 30-07-2022

**ವಿಷಯ**: ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇಲ್ಲಿನ ಕಛೇರಿ ಆವರಣದಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಲು ಸೇವೆಯನ್ನು ಪಡೆಯಲು ದರಪಟ್ಟಿ / ಕೊಟೇಶನ್ ಕರೆಯುವ ಕುರಿತು.

*****

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧೀನದ ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು ಇಲ್ಲಿನ ಕಛೇರಿ ಆವರಣದಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಲು ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ಒಟ್ಟು 09 ಜನ ಸ್ವಚ್ಛತಾಗಾರರ ಸೇವೆಯನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಮುಕ್ತ ದರಪಟ್ಟಿ/ಕೋಟೇಷನ್ ಕರೆಯಲಾಗಿದೆ. ಸರಬರಾಜುದಾರರು ತಾವು ಅಧಿಕೃತ ಸರಬರಾಜುದಾರರೆಂಬ ಬಗ್ಗೆ ಅಥವಾ ಬೇರೆ ಬೇರೆ ಸರ್ಕಾರಿ ಇಲಾಖೆಗಳಿಗೆ ಸರಬರಾಜು ಮಾಡಿರುವ / ಮಾಡುತ್ತಿರುವ ಬಗ್ಗೆ ಮಾಹಿತಿಯನ್ನು ನೀಡಬೇಕಾಗಿರುತ್ತದೆ. ಈ ಕೆಳಗೆ ನಮೂದಿಸಲಾದ 09 ಜನ ಸ್ವಚ್ಛತಾಗಾರರ ಸೇವೆಯನ್ನು ಒದಗಿಸುವ ಅತಿ ಕಡಿಮೆ ದರ (ಮೂಲ ದರ+ಜಿಎಸ್‌ಟಿ+ಇತರೆ ತೆರಿಗೆ ಒಳಗೊಂಡಂತೆ ಸೇವಾ ದರ) ಸೂಚಿಸಿ **"ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ, ಬೆಂಗಳೂರು-560 001"** ಇವರ ಹೆಸರಿಗೆ ಕೋಟೇಶನ್ ಬರೆದು **"ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ, ಬೆಂಗಳೂರು-560 001"** ಇವರ ವಿಳಾಸಕ್ಕೆ ದಿನಾಂಕ: 16.08.2022 ರ ಅಪರಾಹ್ನ 2.00 ಗಂಟೆಯೊಳಗಾಗಿ ತಲುಪುವಂತೆ ಕಳುಹಿಸಲು ಕೋರಲಾಗಿದೆ. ದಿನಾಂಕ: 16/08/2022 ರ ಅಪರಾಹ್ನ 04.00 ಗಂಟೆಗೆ ಹಾಜರಿರುವ ಕೋಟೇಷನ್ ದಾರರ ಸಮ್ಮುಖದಲ್ಲಿ ದರಪಟ್ಟಿ ತೆರೆಯಲಾಗುವುದು. ಲಕೋಟೆಯ ಮೇಲೆ "ದಿನಾಂಕ: 16/08/2022 ಕ್ಕೆ ಕೊನೆಯಾಗುವ ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು ಇಲ್ಲಿನ ಆವರಣ ಸ್ವಚ್ಛತಾ ಕಾರ್ಯನಿರ್ವಹಿಸಲು ಸೇವೆಯನ್ನು ಒದಗಿಸಲು ದರಪಟ್ಟಿ" ಎಂದು ತಪ್ಪದೇ ನಮೂದಿಸುವುದು.

| ಕ್ರ.ಸಂ. | ಸೇವೆಯ ವಿವರ | ಬೇಕಾಗಿರುವ ಸಂಖ್ಯೆ | ಅವಧಿ | ದರ ಪಟ್ಟಿ |
|---|---|---|---|---|
| 01 | ಸ್ವಚ್ಛತಾ ಕಾರ್ಯ, ಸ್ಕ್ಯಾವೆಂಜರ್, ಲಿಫ್ಟ್ ಆಪರೇಟರ್ | 09 | 03 ತಿಂಗಳು | ಮೂಲ ದರ+ಜಿಎಸ್‌ಟಿ+ಇತರೆ ತೆರಿಗೆ ಒಳಗೊಂಡಂತೆ ಸೇವಾ ದರ ರೂ.ಗಳಲ್ಲಿ |

**ಕೆಲಸದ ವ್ಯಾಪ್ತಿ ಮತ್ತು ಸೇವೆಯ ಅತ್ಯಗತ್ಯ:-**

1. ಆಯುಕ್ತರ ಕಛೇರಿ, ಕಾಲೇಜು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಅರಮನೆ ರಸ್ತೆ, ಬೆಂಗಳೂರು ಇಲ್ಲಿನ ಕಛೇರಿ ಆವರಣದಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವುದು;
2. ಸ್ವಚ್ಛತಾ ಕಾರ್ಯ ನಿರ್ವಹಿಸುವ ಸಿಬ್ಬಂದಿಯು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಡವಾಗಿರಬೇಕು;
3. ಕನ್ನಡ ಜ್ಞಾನ ಅತ್ಯಗತ್ಯ;
4. ಸ್ವಚ್ಛತಾ ಸಿಬ್ಬಂದಿಯ ನಿರಂತರ ಸೇವೆಯನ್ನು ಒದಗಿಸಬೇಕು ಹಾಗೂ ಗೊತ್ತುಪಡಿಸಿದ ಸ್ಥಳದಲ್ಲಿ ನಿರಂತರವಾದ ನಿರಂತರ ಶುಚಿಗೊಳಿಸಬೇಕು;
5. ಶುಚಿಗೊಳಿಸುವ ಸಿಬ್ಬಂದಿ ಸಮವಸ್ತ್ರವನ್ನು ಧರಿಸಿರುವುದುದನ್ನು ಏಜೆನ್ಸಿ ಖಚಿತಗೊಳಿಸತಕ್ಕದ್ದು;
6. ರಜಾದಿನಗಳನ್ನು ಹೊರತು ಪಡಿಸಿ ಕಛೇರಿ ಕಾರ್ಯನಿರ್ವಹಿಸುವ ದಿನಕ್ಕೆ ಕಾರ್ಯನಿರ್ವಹಿಸಬೇಕು;
7. ಸೇವಾ ಪೂರೈಕೆದಾರರ ಸಿಬ್ಬಂದಿ ಇಲಾಖೆಯ ಅಧಿಕಾರಿ / ನೌಕರರೊಂದಿಗೆ ಅನುಚಿತವಾಗಿ ವರ್ತಿಸಬಾರದು;
8. ಇಲಾಖೆಯ ಆಸ್ತಿಗೆ ಯಾವುದೇ ನಷ್ಟವನ್ನು ಉಂಟು ಮಾಡಿದರೆ, ಅಂತಹ ನಷ್ಟವನ್ನು ಏಜೆನ್ಸಿಯವರು ಭರಿಸಬೇಕು.

**ದರಪಟ್ಟಿಯ ನಿಯಮ ಮತ್ತು ನಿಬಂಧನೆಗಳು:-**

1. ಕೊಟೇಷನ್‌ದಾರರು ಸಲ್ಲಿಸಿರುವ ದರಪಟ್ಟಿ ಅನ್ನು ಮೇಲ್ಕಂಡ ಕೋಷ್ಟಕದಲ್ಲಿ ತಿಳಿಸಿರುವ ಒಟ್ಟು ಮೊತ್ತದ ಆಧಾರದ ಮೇಲೆ ಎಲ್-1 ಎಂದು ಪರಿಗಣಿಸಲಾಗುವುದು ಹಾಗೂ ಎಲ್ಲಾ ಮೇಲ್ಕಂಡ ಕೋಷ್ಟಕದಲ್ಲಿ ತಿಳಿಸಿರುವ ಸೇವೆಯನ್ನು ಒದಗಿಸಲು **ದರಪಟ್ಟಿ ಸಲ್ಲಿಸುವಂತಹ ಸರಬರಾಜುದಾರರ ದರ ಗರಿಷ್ಠ ಐದು ಲಕ್ಷದ ಮಿತಿಗೊಳಪಟ್ಟಿರುತ್ತದೆ;**
2. ಮೇಲ್ಕಂಡ ಕೋಷ್ಟಕದಲ್ಲಿ ತಿಳಿಸಿರುವ ಸೇವೆಯನ್ನು ಒದಗಿಸುವುದಕ್ಕೆ ದರಪಟ್ಟಿ ಸಲ್ಲಿಸುವಂತಹ ಸರಬರಾಜುದಾರರ ದರಪಟ್ಟಿಯು ಕನಿಷ್ಠ 30 ದಿನಗಳ ಅವಧಿಗೆ ಮಾತ್ರ ಇರುತ್ತದೆ(ದರಪಟ್ಟಿಯನ್ನು ಸಲ್ಲಿಸಿದ ಕೊನೆಯ ದಿನಾಂಕದ ನಂತರ);
3. ಸದರಿ ಕಾರ್ಯನಿರ್ವಹಿಸಲು ಸಲಕರಣೆಗಳು / ಸಾಮಾಗ್ರಿಗಳೊಳಗೊಂಡಂತೆ ದರಪಟ್ಟಿ ಹೊಂದಿರಬೇಕು;
4. ಕಡಿಮೆ ದರ ಸೂಚಿಸಿರುವ ಕೊಟೇಷನ್‌ದಾರರಿಗೆ ಮೇಲೆ ತಿಳಿಸಿರುವ ಸೇವೆಯನ್ನು ಒದಗಿಸಲು ಈ ಕಛೇರಿ ಪತ್ರದಲ್ಲಿ ತಿಳಿಸಲಾಗುವುದು;

5. ಮೇಲಿನಂತೆ ಸ್ವಚ್ಛತಾ ಕಾರ್ಯನಿರ್ವಹಿಸಲು ಕೋರಿಕೆ ಮೇರೆಗೆ ಸೇವೆಯನ್ನು ಒದಗಿಸಿದ ನಂತರ ಹಣ ಪಾವತಿಗಾಗಿ ಬಿಲ್ಲಿನ ನಾಲ್ಕು ಪ್ರತಿಗಳನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001 ಇವರ ಹೆಸರಿಗೆ ಬರೆದು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001 ಇವರ ವಿಳಾಸಕ್ಕೆ ಕಳುಹಿಸಿ ಕೊಡುವುದು;
6. ಸರಬರಾಜು ಆದೇಶದಲ್ಲಿ ಸೂಚಿಸುವ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ಸೇವೆಯನ್ನು ಒದಗಿಸಿದಲ್ಲಿ, ಸರಬರಾಜು ಮಾಡಿದ ಪ್ರಮಾಣಕ್ಕನುಗುಣವಾಗಿ ಬಿಲ್ಲಿನ ಮೊತ್ತ ಪಾವತಿಸಲಾಗುವುದು;
7. ಸರಬರಾಜುದಾರರು ಸರ್ಕಾರ / ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು / ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು / ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕಾಲಕಾಲಕ್ಕನುಗುಣವಾಗಿ ಬದಲಾಯಿಸುವ ಕೊಟೇಷನ್‌ನ ನಿಯಮ ಮತ್ತು ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು;
8. ದರಪಟ್ಟಿ ಸಲ್ಲಿಸುವ ಅರ್ಹ ಸರಬರಾಜುದಾರರು ಜಿಎಸ್‌ಟಿ ಸಂಖ್ಯೆಯನ್ನು ಹಾಗೂ ಪಾನ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ;
9. ಸರಬರಾಜುದಾರರಿಗೆ ಹಣವನ್ನು ಬಿಲ್ಲುಗಳನ್ನು ಸಲ್ಲಿಸಿದ ನಂತರ ನಿಯಮಾನುಸಾರ ಪಾವತಿಸಲು ಕ್ರಮ ತೆಗೆದುಕೊಳ್ಳಲಾಗುವುದು;
10. ದರಪಟ್ಟಿಯನ್ನು ಆಹ್ವಾನಿಸುವ / ದರಪಟ್ಟಿಯಲ್ಲಿ ನಮೂದಿಸಿರುವ ಸೇವೆಯ ಪ್ರಮಾಣವನ್ನು ನಿರ್ಧರಿಸುವ ಹಾಗೂ ಅನುಮೋದಿಸುವ ಪ್ರಾಧಿಕಾರ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು ಆಗಿರುತ್ತದೆ.

**ಕರಡು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇಲಾಖೆ ಇವರಿಂದ ಅನುಮೋದಿಸಲ್ಪಟ್ಟಿದೆ.**

ತಮ್ಮ ವಿಶ್ವಾಸಿ,

ಜಂಟಿನಿರ್ದೇಶಕರು(ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

**ಪ್ರತಿ**:-

1. ನೋಡೆಲ್ ಅಧಿಕಾರಿ, ಇ-ಆಡಳಿತ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(**ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು**)
2. ಇಲಾಖಾ ಸೂಚನಾ ಫಲಕದಲ್ಲಿ ಪ್ರಕಟಿಸಲು